**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ ನ್ಯಾಯಾಲಯ.**

**ರಟ್ಟೀಹಳ್ಳಿ.**

**ಸಿ.ಸಿ.ನಂಬರ್ಃ 117/2018**

ಸಿಡಬ್ಲ್ಯೂಃ 22

ಪಿಡಬ್ಲ್ಯೂಃ 12

| | | |
|---|---|---|
| ಸಾಕ್ಷಿಯ ಹೆಸರು | : | ಅನ್ನಪೂರ್ಣಾ ಹುಲಗೂರ |
| ತಂದೆಯ ಹೆಸರು | : | ಮಹಾದೇವಪ್ಪ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಪಿ.ಐ. ಕರ್ನಾಟಕ ಲೋಕಾಯುಕ್ತ, ಬೆಳಗಾವಿ |
| ವಾಸಸ್ಥಳ | : | ಬೆಳಗಾವಿ |

ಇಂದು ದಿನಾಂಕಃ 14.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ನಾನು ಆಗಸ್ಟ್ 2016 ರಿಂದ ನವೆಂಬರ್ 2017 ವರೆಗೆ ರಟ್ಟಿಹಳ್ಳಿ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

1. ದಿನಾಂಕಃ 20.03.2017 ರಂದು ಚಾಸಾ–19 ರವರಿಂದ ಪ್ರಕರಣದ ಕಡತವವನ್ನು ಪಡೆದುಕೊಂಡು, ಅದೇ ದಿನ ಬೆಳಿಗ್ಗೆ 7–15 ಗಂಟೆಯಿಂದ 8–45 ಗಂಟೆವರೆಗೆ ಚಾಸಾ–2 ರಿಂದ 4 ರವರನ್ನು ಹಾಜರುಪಡಿಸಿಕೊಂಡು ಶವ ಪಂಚನಾಮೆ ಮಾಡಿರುತ್ತೇನೆ. ನಂತರ ಅದೇ ದಿನ ಚಾಸಾ–2 ಮತ್ತು 3 ರವರನ್ನು ಹಾಜರುಪಡಿಸಿಕೊಂಡು ಚಾಸಾ–1 ರವರು ತೋರಿಸಿದ ಜಾಗದಲ್ಲಿ 10 ರಿಂದ 11 ಗಂಟೆವರೆಗೆ ಪಂಚನಾಮೆ ಮಾಡಿರುತ್ತೇವೆ. ಆ ಕಾಲಕ್ಕೆ ಛಾಯಾಚಿತ್ರಗಳನ್ನು ತೆಗೆದಿರುತ್ತೇವೆ. ಮುಂದಿನ ತನಿಖೆಗಾಗಿ ಚಾಸಾ–23 ರವರಿಗೆ ಕಡತವನ್ನು ವರ್ಗಾಯಿಸಿರುತ್ತೇನೆ.

2. ಸಾಕ್ಷಿಯು ಶವ ಪಂಚನಾಮೆಯಾದ ನಿಪಿ–12 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ–12(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಶವ ಪಂಚನಾಮೆ ಕಾಲಕ್ಕೆ ತೆಗೆದ ನಿಪಿ–13 ರಿಂದ 21 ರ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಘಟನಾ ಜಾಗೆಯ ಪಂಚನಾಮೆಯಾದ ನಿಪಿ–3 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ–3(ಇ) ಎಂದು ಗುರುತಿಸಲಾಯಿತು.

3. ಸಾಕ್ಷಿಯು ನಿಪಿ-3ರ ಕಾಲಕ್ಕೆ ತೆಗೆದ ನಿಪಿ-4 ರಿಂದ 11ರಲ್ಲಿರುವ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-10 ಮತ್ತು 11ರ ಪೋಟೋಗಳಲ್ಲಿರುವ ವಾಹನವನ್ನು ನೋಡಿ ಗುರುತಿಸಿದ್ದು, ಸದರಿ ವಾಹನ ಅಪಘಾತಕ್ಕೊಳಗಾಗಿದ್ದು ಎಂದು ನುಡಿಯುತ್ತಾರೆ.

**<u>ಪಾಟೀ ಸವಾಲುಃ</u>** ಆರೋಪಿ ಪರ ಶ್ರೀ. ವಿ.ವಿ.ಎಮ್. ವಕೀಲರಿಂದಃ

1. ನಿಪಿ-4 ಮತ್ತು 5ರಲ್ಲಿ ಚಾಸಾ-1ರವರು ಅಪಘಾತದ ಸ್ಥಳ ತೋರಿಸುತ್ತಿದ್ದಾರೆ. ನಿಪಿ-4ರಲ್ಲಿ ಮುಂದೆ ಕುಮದ್ವತಿ ಬ್ರಿಡ್ಜ್ ಕಾಣಿಸುತ್ತದೆ ಎಂದರೆ ಸರಿ. ಅಪಘಾತ ಸ್ಥಳಕ್ಕೂ ಹಾಗೂ ಕುಮದ್ವತಿ ಬ್ರಿಡ್ಜ್‌ಗೂ ಸುಮಾರು 60-70 ಅಡಿ ದೂರು ಇರುತ್ತದೆ ಎಂದರೆ ಸಾಕ್ಷಿಯು ಅಷ್ಟು ದೂರ ಇರುವುದಿಲ್ಲ, ಸುಮಾರು 15 ಅಡಿ ಇರಬಹುದು ಎಂದು ನುಡಿಯುತ್ತಾರೆ. ಸದರಿ ಪೋಟೋಗಳಲ್ಲಿ ಮೊದಲು ಯಾವ ಪೋಟೋ ತೆಗೆದಿರುತ್ತೇವೆ ಎಂದು ನನಗೆ ನೆನಪಿಲ್ಲ. ಅಪಘಾತಗೊಂಡ ವಾಹನವನ್ನು ಯಾವತ್ತು ಲಿಪ್ಟ್ ಮಾಡಿರುತ್ತೇವೆ ಎಂದು ನನಗೆ ನೆನಪಿಲ್ಲ. ನಿಪಿ-4 ರಿಂದ 9ರ ಪೋಟೋಗಳಲ್ಲಿ ವಾಹನ ಇಲ್ಲ ಎಂದರೆ ಸರಿ. ನಿಪಿ-9 ಮತ್ತು 10ರಲ್ಲಿ ಕುಮದ್ವತಿ ಬ್ರಿಡ್ಜ್ ಇದೆ ಎಂದರೆ ಸರಿ.

2. ಶವ ಪಂಚನಾಮೆ ಹಾಗೂ ಘಟನಾ ಜಾಗೆಯ ಪಂಚನಾಮೆಗಳು ತನಿಖೆಯ ಒಂದು ಭಾಗ ಎಂದರೆ ಸರಿ. ತನಿಖಾ ಕಾಲಕ್ಕೆ ನಾನು ಪಿ.ಎಸ್.ಐ. ಇರುತ್ತೇನೆ ಎಂದರೆ ಸರಿ. ಇಂತಹ ಪ್ರಕರಣಗಳಲ್ಲಿ ಇನಸ್ಪೆಕ್ಟರ್ ಮೇಲಿನ ದರ್ಜೆಯ ಅಧಿಕಾರಿಗಳು ತನಿಖೆ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿಯು ಕೆಲವೊಮ್ಮೆ ಅಧಿಕಾರಿಗಳಿಗೆ ಸಮಯ ಇರುವುದಿಲ್ಲ, ನಾವು ಪಂಚನಾಮೆ ಮಾಡಿ ಮುಂದಿನ ತನಿಖೆಗೆ ವರ್ಗಾಯಿಸುತ್ತೇವೆ ಎಂದು ನುಡಿಯುತ್ತಾರೆ. ಆ ರೀತಿ ಪಂಚನಾಮೆ ಮಾಡುವ ಮೊದಲು ನೀವು ನ್ಯಾಯಾಲಯದಿಂದಾಗಲೀ ಅಥವಾ ಮೇಲಾಧಿಕಾರಿಗಳಿಂದ ಅನುಮತಿ ಪಡೆದಿರುವುದಿಲ್ಲ ಎಂದರೆ ಸಾಕ್ಷಿಯು ಅನುಮತಿ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ಘಟನಾ ಜಾಗೆ ಹಾಗೂ ಶವ ಪಂಚನಾಮೆಗಳಿಗೆ ಚಾಸಾ-1ರವರು ಮಾಹಿತಿ ನೀಡಿರುತ್ತಾರೆ.

3.ನಿಪಿ-3 ಮತ್ತು 12ನ್ನು ಚಾಸಾ-21ರವರು ಬರೆದಿರುತ್ತಾರೆ. ನಿಪಿ-4, 5, 13 ಮತ್ತು 14ರ ಪೋಟೋಗಳಲ್ಲಿ ನಾನು ಪ್ರಕರಣಕ್ಕೆ ಸಂಬಂಧಿಸಿದಂತೆ ನೋಟ್ ಮಾಡಿಕೊಳ್ಳುತ್ತಿದ್ದೆ. ಸದರಿ ನೋಟ್ಸ್‌ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-21ರವರು ಬರೆಯುತ್ತಿರುವ ಛಾಯಾಚಿತ್ರಗಳನ್ನು ತೆಗೆದು ನ್ಯಾಯಾಲಯಕ್ಕೆ ಹಾಜರುಪಡಿಸಿಲು

ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ನಿಪಿ-3 ಮತ್ತು 12 ಗಳನ್ನು ಠಾಣೆಯಲ್ಲಿಯೇ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಮೃತನ ವಾರಸುದಾರರಿಗೆ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಸರಿಯಾಗಿ ಮಾಡಿದ್ದರೇ ಆರೋಪಿ 1 ರವರ ತಪ್ಪಿಲ್ಲ ಎಂದು ಕಂಡು ಬರುತ್ತಿತ್ತು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,ಸಂಚಾರಿ
ನ್ಯಾಯಪೀಠ ರಟ್ಟೀಹಳ್ಳಿ.